**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪ ರವರು ನಿಯಮ-330 ರಡಿ ಪ್ರಸ್ತಾಪಿರುವ- "ಕೊಡಗು ಜಿಲ್ಲೆಯ ಜನರು ಪ್ರಮುಖವಾಗಿ ರೈತರು ಮತ್ತು ಬೆಳೆಗಾರರು ಕಾಯಿದೆಗಳ ಅಸ್ತಿತ್ವಕ್ಕೆ ಮುಂಚೆಯೇ ಕಾಡು ಪ್ರಾಣಿಗಳ ವಸ್ತುಗಳನ್ನು ತಮ್ಮಲ್ಲಿಯೇ ಸಂರಕ್ಷಿಸಿ ಇಟ್ಟುಕೊಂಡಿದ್ದಾರೆ ಮತ್ತು ಸದರಿ ವಸ್ತುಗಳನ್ನು ತಮ್ಮ ಮುಂದಿನ ಪೀಳಿಗೆಗೆ ರವಾನಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನವು ಸ್ವತಂತ್ರ ಪೂರ್ವದಲ್ಲೇ ಸಂಗ್ರಹಿಸಿದವಾಗಿರುತ್ತದೆ ಮತ್ತು ಸಂಗ್ರಹಿಸಿಡಲಾದ ಈ ವಸ್ತುಗಳು ಪ್ರಾಣಿಗಳ ಬೇಟೆಯಾಡಿ ದೊರಕಿದ ವಸ್ತುಗಳಾಗಿರುವುದಿಲ್ಲ. ಎಲ್ಲವೂ ಪ್ರಾಣಿಗಳ ಸಹಜ ಸಾವಿನಿಂದ ದೊರಕಿದ ಕೊಂಬು, ಚರ್ಮ ಹಾಗೂ ಇನ್ನಿತರ ವಸ್ತುಗಳಾಗಿರುತ್ತದೆ. ಕೊಡಗಿನಲ್ಲಿ ನಡೆಯುವ ಅನೇಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ವಸ್ತುಗಳಿಗೆ ಪೂಜೆ ಪುರಸ್ಕಾರಗಳನ್ನು ಮಾಡುವ ವಾಡಿಕೆ ಇಂದಿಗೂ ಚಾಲ್ತಿಯಲ್ಲಿರುತ್ತದೆ ಮತ್ತು ಕಾಡು ಪ್ರಾಣಿಗಳ ವಸ್ತುಗಳನ್ನು ಕುಟುಂಬದ ಚರಾಸ್ತಿ ಎಂದೇ ಪರಿಗಣಿಸಲಾಗಿದೆ. ಆದುದರಿಂದ ಇಲ್ಲಿನ ಸಂಸ್ಕೃತಿ ಆಚಾರ ವಿಚಾರಗಳನ್ನು ಉಳಿಸುವ ದೃಷ್ಟಿಯಿಂದ ಪೂರ್ವಜರು ಉಳಿಸಿ ಪೂಜೆಗೆ ಬಳಸುವ ಕಾಡು ಪ್ರಾಣಿಗಳ ವಸ್ತುಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಲು ಅರಣ್ಯ ಇಲಾಖೆ ಅಧಿಕಾರಿಗಳಿಂದ ಆಗುತ್ತಿರುವ ತೊಂದರೆ ಕುರಿತು" ಮಾನ್ಯ ಅರಣ್ಯ. ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*****

ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972 ಅನ್ನು ಜಾರಿಗೊಳಿಸುವ ಸಮಯದಲ್ಲಿ ರಾಜ್ಯದ ಕೆಲವು ಜನರು ತಮ್ಮೊಂದಿಗೆ ವನ್ಯಜೀವಿ/ಪ್ರಾಣಿಗಳ ಅಂಗಾಂಗಗಳು, ಟ್ರೋಫಿಗಳು ಮತ್ತು ಸಂಸ್ಕರಿಸದ ಟ್ರೋಫಿಗಳನ್ನು ಹೊಂದಿರುತ್ತಾರೆ. ಆದರೆ ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972 ರ ಸೆಕ್ಷನ್ 44 ರನ್ವಯ ಇಂತಹ ಟ್ರೋಫಿಗಳನ್ನು ಹೊಂದುವುದನ್ನು ನಿಷೇದಿಸಲಾಗಿದೆ. ಮುಂದುವರೆದು ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, 1972 ಜಾರಿಯಾದ 30-ದಿನಗಳ ಒಳಗೆ ಕಾಯ್ದೆಯ ಸೆಕ್ಷನ್ 40(1) ರ ಪ್ರಕಾರ, ವನ್ಯಜೀವಿ/ಪ್ರಾಣಿಗಳ ಅಂಗಾಂಗಗಳು, ಟ್ರೋಫಿಗಳು ಮತ್ತು ಸಂಸ್ಕರಿಸದ ಟ್ರೋಫಿಗಳನ್ನು ಹೊಂದಿರುವ ವ್ಯಕ್ತಿಯು ಘೋಷಿಸಿಕೊಂಡು ಮತ್ತು ಸಕ್ಷಮ ಪ್ರಾಧಿಕಾರದಿಂದ ಮಾಲೀಕತ್ವದ ಪ್ರಮಾಣ ಪತ್ರ ಪಡೆಯಲು ಕಾಲಾವಾಕಾಶವನ್ನು ನೀಡಲಾಗಿತ್ತು. ಅಲ್ಲದೇ, ವನ್ಯಜೀವಿ (ಸಂರಕ್ಷಣಾ) (ಕರ್ನಾಟಕ ನಿಯಮಗಳು) 1973 ರ ನಿಯಮ 34 (1) ರಡಿಯಲ್ಲಿ ನಿಯಮ ಜಾರಿಯಾದ 30-ದಿನಗಳ ಒಳಗೆ ಅಂತಹ ಟ್ರೋಫಿಗಳನ್ನು ಹೊಂದಿರುವ ವ್ಯಕ್ತಿಯು ಘೋಷಿಸಿಕೊಂಡು ಮತ್ತು ಮಾಲೀಕತ್ವದ ಪ್ರಮಾಣಪತ್ರ ಪಡೆಯಲು ಸಹ ಕಾಲಾವಾಕಾಶವನ್ನು ನೀಡಲಾಗಿತ್ತು. ಮತ್ತೊಮ್ಮೆ 2003 ರಲ್ಲಿ ವನ್ಯಜೀವಿ ದಾಸ್ತಾನು ಘೋಷಣಾ ನಿಯಮಗಳು, 2003 ರನ್ವಯ 180-ದಿನಗಳ ಒಳಗೆ ವನ್ಯಜೀವಿ/ಪ್ರಾಣಿಗಳ ಅಂಗಾಂಗಗಳು, ಟ್ರೋಫಿಗಳು ಮತ್ತು ಸಂಸ್ಕರಿಸದ ಟ್ರೋಫಿಗಳನ್ನು ಹೊಂದಿರುವ ವ್ಯಕ್ತಿಯು ಅವುಗಳನ್ನು ಘೋಷಿಸಿಕೊಳ್ಳಲು ಕಾಲಾವಾಕಾಶವನ್ನು ನೀಡಲಾಗಿತ್ತು. ಈ ಕಾಯ್ದೆ/ನಿಯಮಗಳನ್ವಯ ಟ್ರೋಫಿಗಳನ್ನು ಘೋಷಿಸಿಕೊಂಡು ಮಾಲೀಕತ್ವದ ಪ್ರಮಾಣ ಪತ್ರ ಪಡೆದ ವ್ಯಕ್ತಿಗಳು ಅಂತಹ ಟ್ರೋಫಿಗಳನ್ನು ಹೊಂದಲು ಅವಕಾಶವಿರುತ್ತದೆ.

ಆದಾಗ್ಯೂ, ಕಾನೂನುಗಳ ಅರಿವಿನ ಕೊರತೆ ಅಥವಾ ಅಂಗಾಂಗ/ಟ್ರೋಫಿಗಳ ಸಣ್ಣ ಗಾತ್ರ ಅಥವಾ ಅಂಗಾಂಗ/ಟ್ರೋಫಿಗಳನ್ನು ಇಟ್ಟುಕೊಳ್ಳುವ ಕುಟುಂಬದ ಪದ್ಧತಿಯಿಂದಾಗಿ ಕೆಲವರು ಇನ್ನೂ ಕೆಲವು ಅಥವಾ ಎಲ್ಲಾ ವನ್ಯಪ್ರಾಣಿಗಳ ಅಂಗಾಂಗ ಮತ್ತು ಟ್ರೋಫಿಗಳನ್ನು ಘೋಷಿಸಿಲ್ಲ ಎಂದು ತೋರುತ್ತದೆ.

ಆದುದರಿಂದ, ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ರಾಜ್ಯ ಸರ್ಕಾರಕ್ಕೆ ಅಧ್ಯರ್ಪಿಸಲು ಕಾಲಾವಕಾಶವನ್ನು ವಿಸ್ತರಿಸುವಂತೆ ಹಲವಾರು ಬಾರಿ ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹರಿಸಲಾಗಿದೆ. ದಿನಾಂಕಃ 31.10.2023 ರಂದು ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ವನ್ಯಜೀವಿ ಅಂಗಾಂಗ/ ಟ್ರೋಫಿಗಳನ್ನು ರಾಜ್ಯ ಸರ್ಕಾರಕ್ಕೆ ಅಧ್ಯರ್ಪಿಸಲು ಕಾಲಾವಕಾಶವನ್ನು ವಿಸ್ತರಿಸುವಂತೆ ಕೋರಲಾಗಿದೆ. ಆದರೆ ಕೇಂದ್ರ ಸರ್ಕಾರದಿಂದ ಈ ಕುರಿತು ಯಾವುದೇ ಅವಕಾಶ ನೀಡಿರುವುದಿಲ್ಲ.

......2

ಮುಂದುವರೆದು, ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರಲ್ಲಿ ರಾಜ್ಯ ಸರ್ಕಾರಕ್ಕೆ ಈಗಾಗಲೇ ಇರುವ ಅಂಗಾಂಗ ಟ್ರೋಫಿಗಳಿಗೆ ಮಾಲೀಕತ್ವ ಪ್ರಮಾಣಪತ್ರ ನೀಡುವ ಕಾಲಾವಧಿಯನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ. ಆದರೆ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಸೆಕ್ಷನ್ 64 ರನ್ವಯ ರಾಜ್ಯ ಸರ್ಕಾರಕ್ಕೆ ನೀಡಿರುವ ಅಧಿಕಾರದನ್ವಯ ವನ್ಯಜೀವಿ (ಸಂರಕ್ಷಣೆ-ಅಘೋಷಿತ ವನ್ಯಜೀವಿ / ಪ್ರಾಣಿಗಳ ಅಂಗಾಂಗಳ ಪದಾರ್ಥಗಳು, ಟ್ರೋಫಿಗಳು ಮತ್ತು ಸಂಸ್ಕರಿಸಿದ ಟ್ರೋಫಿಗಳನ್ನು ಅಧ್ಯರ್ಪಿಸಲು ಅವಕಾಶ) ಕರ್ನಾಟಕ ನಿಯಮಗಳು, 2024 ಎಂಬ ನಿಯಮವನ್ನು ರಚಿಸಿ, ಸರ್ಕಾರದ ಆದೇಶ ಸಂಖ್ಯೆ:FEE 103 FWL 2023, ದಿನಾಂಕ: 10.01.2024 ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಅದರನ್ವಯ, ಈ ಹಿಂದೆ ಒದಗಿಸಿದ ಅವಕಾಶಗಳಲ್ಲಿ ಅಂಗಾಂಗ ಮತ್ತು ಟ್ರೋಫಿಗಳ ಘೋಷಣೆಗಳನ್ನು ಮಾಡಿಕೊಂಡಿರದ ಜನರಿಗೆ ರಾಜ್ಯ ಸರ್ಕಾರದ ಆಸ್ತಿಯಾಗಿರುವ ವನ್ಯಜೀವಿ ಅಂಗಾಂಗ / ಟ್ರೋಫಿಗಳನ್ನು ರಾಜ್ಯ ಸರ್ಕಾರಕ್ಕೆ ಅಧ್ಯರ್ಪಿಸಲು 90 ದಿನಗಳ ಅವಕಾಶವನ್ನು ಒದಗಿಸಲಾಗಿತ್ತು. ಸದರಿ ಅವಧಿಯಲ್ಲಿ ರಾಜ್ಯದ ವಿವಿಧ ಪ್ರದೇಶಗಳಿಂದ ಒಟ್ಟು 192 ಜನರು ವಿವಿಧ ರೀತಿಯ ವನ್ಯಜೀವಿ ಟ್ರೋಫಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಆದರೆ ಕೊಡಗು ವೃತ್ತದ ವಿಭಾಗಗಳಲ್ಲಿ ಸಾರ್ವಜನಿಕರಿಂದ ಯಾವುದೇ ವನ್ಯಜೀವಿ/ ಪ್ರಾಣಿಗಳ ಅಂಗಾಂಗಳನ್ನು ಸರ್ಕಾರಕ್ಕೆ ಒಪ್ಪಿಸಿರುವುದಿಲ್ಲ.

ಪ್ರಸ್ತುತ ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972ರಡಿಯಲ್ಲಿ ಅಘೋಷಿತ ವನ್ಯಜೀವಿ ವಸ್ತು ಅಥವಾ ಟ್ರೋಫಿಗಳನ್ನು ಇಟ್ಟುಕೊಳ್ಳಲು ಅವಕಾಶ ಇರುವುದಿಲ್ಲ.

**ಸಂಖ್ಯೆ: ಅಪಜೀ 109 ಎಫ್‌ಡಬ್ಲ್ಯೂಎಲ್ 2024**

(ಈಶ್ವರ ಬಿ.ಖಂಡ್ರೆ)

**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**